ಶ್ರೀ ಕಡಿದಾಳ್ ಮಂಜಪ್ಪ.—ಭದ್ರಾ ವಿಚಾರದಲ್ಲಿ ಒಂದು Go-slow ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಈಚೆಗೆ ಕೇಂದ್ರದಿಂದ ಸಹಾಯ ಬರುತ್ತ ದೆಂದಾದಮೇಲೆ ಒಂದು ಕಾರ್ಯಪಟ್ಟಿಯನ್ನು ಹಾಕಿ ಕೊಂಡು ಅದರಮೇಲೆ ಕೆಲಸಮಾಡುತ್ತಿದ್ದೇವೆ. ಈ ಪ್ರಕಾರ 1956ನೆಯ ಜೂವರೆಗೂ ಕೆಲಸಮಾಡಿ ಒಂದು ಹಂತವನ್ನು ಮುಟ್ಟಬೇಕೆಂದಿದ್ದೇವೆ. ಆ stage ನವರೆಗೆ ಬಂದರೆ 25,000 ಎಕರೆಗಳಿಗೆ ಸಾಗು ವಳಿಗೆ ನೀರು ಒದಗಬಹುದೆಂಬ ನಿರೀಕ್ಷಣೆಯಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸ್ಕೀಮನ್ನು ಕಾರ್ಯಗತಮಾಡುವಾಗ, ಚಾನಲನ್ನೂ ಮತ್ತು ಅಣೆ ಕಟ್ಟನ್ನೂ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ರೀತಿ ಮಾಡುತ್ತಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಈ ಅವಧಿಯೊಳಗೆ ಪೂರೈಸುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟರೊಳಗೇ ಮುಗಿಯುತ್ತದೆಂದು ನಿರೀಕ್ಷಿಸಿದ್ದೇವೆ.

ಶ್ರೀ ಬಿ. ರಾಚಯ್ಯ.—ಈ ಜಲಾಶಯಗಳ ಕೆಳಗೆ ಬರುವ ಅಚ್ಚುಕಟ್ಟು ಪ್ರದೇಶಗಳು ಯಾವ ಯಾವ ಡಿಸ್ಟ್ರಿಕ್ಟ್‌ಗಳಲ್ಲಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನುಗು ಕೆಳಗೆ ಬರುವುದು ಮೈಸೂರು ಡಿಸ್ಟ್ರಿಕ್ಟು; ತುಂಗಾ ಅಣೆಕಟ್ಟಿನ ಕೆಳಗೆ ಬರುವ ಅಚ್ಚುಕಟ್ಟು ಪ್ರದೇಶ ಶಿವಮೊಗ್ಗ ಡಿಸ್ಟ್ರಿಕ್ಟಿನದು; ಭದ್ರಾ ಕೆಳಗೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಮತ್ತು ಬಳ್ಳಾರಿ.

ಶ್ರೀ ಬಿ. ರಾಚಯ್ಯ.—ತಾಲ್ಲೂಕುವಾರು ಎಷ್ಟೆಷ್ಟು ಎಕರೆಗಳೆಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ನೋಟೀಸ್ ಬೇಕು. ಸಾಧ್ಯವಾದರೆ ಒಂದು ಪುಸ್ತಕವನ್ನು ಅಚ್ಚು ಹಾಕಿಸಿಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ನುಗುವಿನಲ್ಲಿ ಚಾನಲ್ ಕೆಲಸ ಪುರುವಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿದೆ.

ಶ್ರೀ ಬಿ. ರಾಚಯ್ಯ.—ಎಷ್ಟು ಎಕರೆಗಳಿಗೆ ನೀರು ಸರಬರಾಯಿಯಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ನೀರು ಕೊಟ್ಟಿಲ್ಲ.

ಶ್ರೀ ವಿ. ಮಸಿಯಪ್ಪ.—ಭದ್ರಾ ಪ್ರಾಜೆಕ್ಟಿಗೆ ಇದುವರೆಗೆ 293 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ ಯೆಂತಲೂ, 2,24,000 ಎಕರೆಗಳು ಸಾಗುವಳಿಗೆ ಬರುತ್ತವೆಂದೂ ಹೇಳಿದ್ದೀರಿ. ಪೂರ್ತಿ ಅಚ್ಚುಕಟ್ಟನ್ನು ಸಾಗುವಳಿಗೆ ತರುವುದಕ್ಕೆ ಬಹಳಕಾಲ ಹಿಡಿಯುತ್ತದೆ ಯಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪ.—ಅದು ಬಹಳಮಟ್ಟಿಗೆ ರೈತರನ್ನವಲಂಬಿಸಿದೆ.

ಶ್ರೀ ವಿ. ಮಸಿಯಪ್ಪ.—ಈ ಪ್ರಾಜೆಕ್ಟ್ ಪೂರ್ತಿ ಯಾಗುವುದರೊಳಗಾಗಿ ಅಚ್ಚುಕಟ್ಟನ್ನೂ ಸಾಗುವಳಿಗೆ ತರುವುದಕ್ಕೆ ಏರ್ಪಾಡುಮಾಡುವುದು ಅನುಕೂಲ ವಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಮಾಡಬೇಕಾದ ಕೆಲಸಗಳೂ ಕೆಲವಿವೆ. ಸರ್ಕಾರಿ ಜಮೀನನ್ನು ಸರ್ಕಾರದವರು ಇತರರಿಗೆ ಕೊಡಬೇಕಾಗುತ್ತದೆ. ಹಿಡುವಳಿದಾರರೂ ತಮ್ಮ ಜಮೀನನ್ನು ರೂಢಿಸುವುದಕ್ಕೆ ಪ್ರಯತ್ನಿಸಬೇಕು.

Mr. SPEAKER.—This question is concerned only about the irrigation scheme and not about the land that will be brought under irrigation. It is not a proper supplementary.

Sri V. MASIYAPPA.—My supplementary is based on the answer furnished to clause (*d*) of the question, namely; "when they propose to complete each one of them and what is the area benefited under each one of them;". My supplementary is with regard to the period within which the proposed extent is likely to be brought under cultivation and the proposal they have made to bring the atchkat under cultivation and if they have got any scheme to see that 2,40,000 acres will be brought under cultivation.

Mr. SPEAKER.—If the Government can answer, I have no objection; but let us not waste time.

ಶ್ರೀ ಕಡಿದಾಳ್ ಮಂಜಪ್ಪ.—ನಾವು ನೀರು ಕೊಡುವುದಕ್ಕೆ ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬಹುದು. ಸರ್ಕಾರದವರು ಏನೇನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನೆಲ್ಲಾ ಮಾಡಬಹುದು. ಆದರೆ ಅಚ್ಚುಕಟ್ಟಿನಲ್ಲಿ ಖಾನಗಿ ಜನರಿಗೆ ಸೇರಿದ ಜಮೀನುಗಳೂ ಇವೆ, ಸರ್ಕಾರಿ ಜಮೀನುಗಳೂ ಇವೆ. ಸರ್ಕಾರಿ ಜಮೀನುಗಳನ್ನು ನಾವು ವಿಲೇವಾರಿ ಮಾಡಬೇಕು. ಅದರ ನಂತರ ಸಂಬಂಧಪಟ್ಟ ಮಾಲೀಕರೂ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕಾಗುತ್ತದೆ. ಆದ್ದರಿಂದ ಈಗಲೇ ಅಚ್ಚುಕಟ್ಟನ್ನು ಸಿದ್ಧಮಾಡುತ್ತೇವೆಂದು ಹೇಳುವುದು ಕಷ್ಟ. ಹೇಗೆ ಮಾಡಬೇಕು ಎಂಬುದನ್ನು ಮಾನ್ಯ ಸದಸ್ಯರು ತಿಳಿಸಬಹುದು.

ಶ್ರೀ ವಿ. ಮಸಿಯಪ್ಪ.—ಬೇರೆ ಪ್ರಾಜೆಕ್ಟುಗಳ ಕೆಳಗೆ ವ್ಯವಸಾಯಗಾರರಿಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಟ್ಟು ಸಾಗುವಳಿಗೆ ಏರ್ಪಾಡುಮಾಡುತ್ತಿದ್ದೀರಲ್ಲವೇ?

Mr. SPEAKER.—I do not allow further supplementaries. On this question.

Gungurumele tank in Tiptur Taluk (Restoration).

Q.—441. Sri N. HUCHMASTHY GOWDA (Huliyurdurga).—

Will the Government be pleased to state:—

(*a*) when the estimate for the restoration of Gungurumele tank in Tiptur Taluk was prepared;

(*b*) the cost of the estimate;

(*c*) at what stage the progress of the said work now stands;

(*d*) whether it has been brought to the notice of the Executive Engineer, Tumkur Division and the Superintending Engineer and also the Minister regarding the restoration of the said tank by any of the members of the Legislative Assembly ;

(*e*) the steps taken in this behalf ?

A.—Sri Kadidal MANJAPPA (Minister for Revenue and Public Works).—

(*a*) In 1928.

(*b*) Rs. 1,745.

(*c*) the work has been closed with an outlay of Rs. 1,363 during the year 1935.

(*d*) Yes..

(*e*) Surveys are conducted and an estimate amounting to Rs. 16,000 for re-restoring the same is got up and is under scrutiny.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1,363 ರೂಪಾಯಿನ ಕೆಲಸ ಮಾಡುವುದಕ್ಕೆ 7 ವರ್ಷ ತೆಗೆದುಕೊಳ್ಳುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಧ್ಯದಲ್ಲಿ ಆ ಕೆಲಸ ನಿಂತಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಾಡಿದ ಕೆಲಸವೂ ಕೂಡ ಕೊಚ್ಚಿಹೋಗಿದೆಯೆಂಬುದು ಇಂಜಿನಿಯರ್ ಇಲಾಖೆಯವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಂಥ ಪೂರ್ತಿಯಾಗಿ ಕೆಲಸವಾಗದಿರುವ ಕೆಲಸಗಳ ವಿಚಾರದಲ್ಲಿ ಆಗಾಗ್ಗೆ ನೋಡಿ restore ಮಾಡುವುದನ್ನು ಇಂಜಿನಿಯರ್ ಇಲಾಖೆಯವರು ಗಮನಿಸುವುದುಂಟೇ ? ಅಥವಾ ಸದಸ್ಯರುಗಳೇ ಅವರ ಗಮನಕ್ಕೆ ತರಬೇಕೇ ?

ಶ್ರೀ ಕಡಿದಾಳ್ ಮಂಜಪ್ಪ.—ಸದಸ್ಯರುಗಳು ಹೇಳಿದ್ದನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದು ಅವರ ಕರ್ತವ್ಯವೆಂದು ಸರ್ಕಾರದವರು ಒತ್ತಿ ಒತ್ತಿ ಸೂಚನೆ ಕೊಟ್ಟಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅವರ ಕರ್ತವ್ಯವಾದರೂ ಅದನ್ನು ಮಾಡದೆ, ಮಾನ್ಯ ಸದಸ್ಯರುಗಳು ಎರಡುಮೂರು ವರ್ಷದಿಂದ ಒತ್ತಾಯ ಮಾಡಿದರೂ ಎಗ್ಜಿಕ್ಯೂಟಿವ್ ಇಂಜಿನಿಯರು ಗಮನಕ್ಕೆ ತೆಗೆದುಕೊಳ್ಳದೆ ಇರುವುದಕ್ಕೆ ವಿಶೇಷ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಾಜೆಕ್ಟಿನ ಸಂಬಂಧದಲ್ಲಿ ಒಂದು ಎಸ್ಟಿಮೇಟನ್ನು ತಯಾರು ಮಾಡಿದ್ದಾರೆ. ಅದರ ಅಂದಾಜು ಪೊಬಲಗು ಬಹಳ ಹಾಸ್ತಿಯಾಗುತ್ತದೆ. The atchkat to be benefited is only ten acres.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದರಿಂದ 80 ಎಕರೆಗೆ ನೀರೊದಗುತ್ತದೆಂದು ಗೊತ್ತಿದೆಯೇ ! ಹಿಂದೆ ಅಲ್ಲ 80 ಎಕರೆ ಅಚ್ಚುಕಟ್ಟೇ ಇರಲಿಲ್ಲವೇ !

ಶ್ರೀ ಕಡಿದಾಳ್ ಮಂಜಪ್ಪ.—80 ಎಕರೆ ಇರಲಿಲ್ಲ. ನಮ್ಮಲ್ಲಿರತಕ್ಕ ರಿಕಾರ್ಡ್ ಪ್ರಕಾರ ಇರುವುದು 10 ಎಕರೆ ಮಾತ್ರ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನಗೆ ತಿಳಿದಿರುವಂತೆ ಹಾಗೂ ರೈತರು ಹೇಳುವಂತೆ 80 ಎಕರೆ ಸಾಗುವಳಿಯಾಗುವುದರಿಂದ ಈ ಅಂದಾಜನ್ನು ಪುನರ್ವಿಮರ್ಶೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—80 ಎಕರೆಗಳು ನೀರಾವರಿಯಾಗುವುದಾದರೆ ಪರಿಶೀಲನೆ ಮಾಡುತ್ತೇವೆ.

Tanks in Mayasandra Hobli (Construction).

Q.—461. Sri B. HUTCHE GOWDA (Turuvekere).—

Will the Government be pleased to state :—

(*a*) whether estimates have been prepared for constructing the tanks in (1) Mallidevanahally, (2) Kanakuru, (3) Hithalakoppa and (4) Malligere villages of Mayasandra Hobli, Turuvekere Taluk ; if so, the estimated amount ;

(*b*) of them, the estimates of which tanks have been sanctioned and the works that are executed ; the amount spent ;

(*c*) whether sanction for the construction of the tanks would be accorded early ?

A.—Sri Kadidal MANJAPPA (Minister for Revenue and Public Works).—

(*a*) Yes.

	Rs.
(i) Mallidevanahalli	... 60,000
(ii) Kanakur	... 58,000
(iii) Hittalakoppa	... 38,000
(iv) Dodmalligere	... 77,000

(*b*) Hittalakoppa Tank—

Amount spent ... Rs. 9,772

(*c*) This will be considered when the estimates are received.

ಶ್ರೀ ಬಿ. ಹುಚ್ಚೇಗೌಡ.—ಈ ನಾಲ್ಕು ಕೆರೆಗಳಿಗೂ ಎಸ್ಟಿಮೇಟ್ ಮಾಡಿರುವ ಪ್ರಕಾರ ಅಚ್ಚುಕಟ್ಟು ಎಷ್ಟು ?

Sri Kadidal MANJAPPA.—I am sorry ; those figures are not available here.